# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Addl.Dir/JD NORTH/0136/2017-18 ದಿನಾಂಕ: 25-07-2019

## ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಸಂಖ್ಯೆ: 636, ಸರ್ವೆ ನಂ. 50/11, 50/12, 50/13, ವೈಟ್‌ಫೀಲ್ಡ್ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ವಾರ್ಡ್ ಸಂಖ್ಯೆ: 84, ಮಹದೇವಪುರ ವಲಯ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD NORTH/0136/2017-18 ರಂತೆ ದಿನಾಂಕ: 30-08-2017.
2) ತಮ್ಮ ಮನವಿ ಪತ್ರ ದಿನಾಂಕ: 14-06-2019.

* * * * * * *

ಆಸ್ತಿ ಸಂಖ್ಯೆ. 636, ಸರ್ವೆ ನಂ. 50/11, 50/12, 50/13, ವೈಟ್‌ಫೀಲ್ಡ್ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ವಾರ್ಡ್ ನಂ. 84, ಮಹದೇವಪುರ ವಲಯ, ಬೆಂಗಳೂರು ಇಲ್ಲಿ ತಳ + ನೆಲ + ಮೇಲಿನ 9 ಅಂತಸ್ತುಗಳ 161 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಪ್ರಸ್ತುತ ಸದರಿ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ ಸದರಿ ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ನಡುಜಾಗಗಳನ್ನು ಬಿಟ್ಟು ಕಟ್ಟಡದ ನಿರ್ಮಾಣ ಮಾಡುತ್ತಿರುವುದನ್ನು ಗಮನಿಸಲಾಗಿರುತ್ತದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 22-07-2019 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ಶುಲ್ಕ ರೂ. 1,55,000/- ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/000200 ದಿನಾಂಕ: 25-07-2019 ರಂದು ಸಂದಾಯ ಮಾಡಿರುವುದರಿಂದ, ಸದರಿ ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**ಷರತ್ತುಗಳು**

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಯಾವುದೇ ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
3. ನಕ್ಷೆ ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.
4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5. ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ಮತ್ತು ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.
6. ವಿವಿಧ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು

B.R. Muddaki 25/7/19

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

25/7/19 25/7/19 26/2

ಗೆ,

ಮೆ॥ ಹಕ್ ಪ್ರಾಪರ್ಟೀಸ್ ಎಲ್‌ಎಲ್ ಪಿ, ಖಾತಾದಾರರು
ಮೆ॥ ಎಎಲ್‌ವಿ ಪ್ರಾಜೆಕ್ಟ್ಸ್ ಪ್ರೈ ಲಿ.,
ಪರವಾಗಿ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ.ಈ.ಭಾಸ್ಕರ್ ಜಿ.ಪಿ.ಎದಾರರು,
# 602, 6ನೇ ಹಂತ, ಬಿಇಎಂಎಲ್ ಲೇಔಟ್,
ತೂಬರಹಳ್ಳಿ, ಬೆಂಗಳೂರು– 560 056

O/C